ದಿನಾಂಕ 8-9-1987ರಲ್ಲಿ ಕೇಸ್ ನಂ : 68 : 87ರ ಪ್ರಕಾರ ಬಿ.ಐ.ಎಫ್.ಆರ್.ಸಂಸ್ಥೆಯು ಈ ಪಟಕವನ್ನು ರೋಗಗ್ರಸ್ಥ ಪಟಕವೆಂದು ಪೋಷಿಸಿತು.

ಈ ಘಟಕದ ಪುನಃಶ್ಚೇತನೆಗೆ ಎಲ್ಲಾ ರೀತಿಯಲ್ಲಿ ಪರಿಶೀಲಿಸಿದ ನಂತರ ಪುನಶ್ಚೇತನ ಸಾಧ್ಯವಿಲ್ಲವೆಂದು ದಿನಾಂಕ : 23-9-1988ರ ಆದೇಶದಲ್ಲಿ ಬಿ.ಐ.ಎಫ್.ಆರ್. ಸಂಸ್ಥೆಯು ಸಮಾಪ್ತಿಗೊಳಿಸಲು ಆದೇಶಿಸಿ ಬಾಂಬೆ ಹೈಕೋರ್ಟಿನ ಆದೇಶದ ಸಂಖ್ಯೆ : ಡಿಎಲ್:ಐಎನ್‌ಬಿಪಿ:576 ದಿನಾಂಕ 28-4-1959ರ ಪ್ರಕಾರ ಸಮಾಪ್ತನಾದಿಕಾರಿಯನ್ನು ನಿಯಮಿಸಿ ಘಟಕವನ್ನು ಸಮಾಪ್ತಿಗೊಳಿಸಲು ಆದೇಶಿಸಿರುತ್ತದೆ. ಆದ್ದರಿಂದ ಈ ಹಂತದಲ್ಲಿ ಈ ಘಟಕವನ್ನುಪುನಃಶ್ಚೇತನಗೊಳಿಸುವುದು ಸಾಧ್ಯವಿರುವುದಿಲ್ಲ.

ಅಧ್ಯಕ್ಷರು : ಪಟ್ಟಿಗಳನ್ನು ಮಂಡಿಸಲಾಯಿತು.

ವರದಿಗಳನ್ನೊಪ್ಪಿಸುವುದು.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಕಲ್ಯಾಣ ಸಮಿತಿಯ 15ನೇ ವರದಿಯನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಶ್ರೀ ಎಂ. ಪುಟ್ಟಸ್ವಾಮಿ ಗೌಡ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನ ಸಭೆಯ ಸರ್ಕಾರಿ ಭರವಸೆಗಳ ಸಮಿತಿಯ 16,17,18,19,20,21,22,23 ಮತ್ತು 24ನೇ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನ ಮಂಡಲದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯ 4 ಮತ್ತು 5ನೇ ವರದಿಗಳನ್ನು ಒಪ್ಪಿಸುತ್ತಿದ್ದೇನೆ.

ಶ್ರೀ ಡಿ. ಹಲಗೇಗೌಡ : ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ 58ನೇ ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು : ಎಲ್ಲಾ ವರದಿಗಳನ್ನು ಸಭೆಗೆ ಒಪ್ಪಿಸಲಾಗಿದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ :-

ವಿಷಯ : ಉತ್ತರಕನ್ನಡ ಜಿಲ್ಲೆಯ ಭಟ್ಕಳದಲ್ಲಿ ನಡೆಯುತ್ತಿರುವ ಕೋಮುಗಲಭೆಗಳ ಬಗ್ಗೆ.

*ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಏನು ಕೋಮು ಗಲಭೆ ನಡೆಯುತ್ತಿದೆ ಅದರ ಬಗ್ಗೆ ಈಗಾಗಲೇ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ.

ಸರ್ಕಾರದವರು ನಾವು ಎಲ್ಲಾ ರೀತಿಯಲ್ಲಿ ಅಲ್ಲಿ ಕಮ್ಯುನಲ್ ಹಾರ್ಮನಿ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಶಾಂತಿ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ ಮತ್ತು ಯಾರು ಇಂಜೂರು ಆಗಿದ್ದಾರೆ. ಅವರಿಗೆ ಕಾಂಪನ್‌ಸೇಷನ್ ಕೊಡುತ್ತೇವೆಂದು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಮುಖ್ಯಮಂತ್ರಿಗಳ ಪರವಾಗಿ ಭರವಸೆ ಕೊಟ್ಟಿದ್ದರು. ಆದರೆ ನನಗನ್ನಿಸುತ್ತದೆ, ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಏನು ಹೇಳಿದರು, ಅದು ಹಾಗೆಯೇ ಉಳಿಯಿತು. ಮುಖ್ಯಮಂತ್ರಿಗಳು ಆ ಕಡೆ ಹೋಗಲಿಲ್ಲ. ಏಕೆಂದರೆ ಇವತ್ತಿಗೂ ಗಲಾಟೆಗಳು, ಕೋಮು ಗಲಭೆಗಳು ಭಟ್ಕಳದಲ್ಲಿ ನಡೆಯುತ್ತಿವೆ. ನಿನ್ನೆ ರಾತ್ರಿ ನನಗೆ ಫೋನ್ ಬಂತು ; ಇಂದು ಮುಂಜಾನೆ ಕೂಡ ಬಂದಿದೆ. ನಿನ್ನೆ ಒಬ್ಬ ಪೈ ಎಂಬುವರ ಅಂಗಡಿಯನ್ನು ಲೂಟಿ ಮಾಡಿದ್ದಾರೆ, ಬೆಂಕಿ ಹಚ್ಚಿದ್ದಾರೆ. ಈ ವಿಚಾರದಲ್ಲಿ ನನಗೆ ಪೈ ಅವರು ದೂರವಾಣಿ ಮಾಡಿದ್ದಾರೆ. ಅದೇ ಪ್ರಕಾರ ಒಬ್ಬರು ಇಬ್ರಾಹಿಂ ಎಂದು, ಅವರು ಪಿಡಬ್ಲ್ಯುಡಿ ಕಂಟ್ರಾಕ್ಟರ್. ಭಟ್ಕಳದಿಂದ 12 ಕಿ.ಮೀ ದೂರದಲ್ಲಿ ವಾಸವಾಗಿದ್ದಾರೆ. ಇದರ ಬಗ್ಗೆ ಆರ್‌ಎನ್ ನಾಯಕ್ ಅವರೂ ಚೆನ್ನಾಗಿ ಬೆಳಕು ಚೆಲ್ಲಬಹುದು. ಅವರು ಹೇಳಬಹುದು. ಅಲ್ಲಿ ಇವರ ಆಸ್ತಿಪಾಸ್ತಿಗೆ ನಷ್ಟ ಮಾಡಿದ್ದಾರೆ, ಟ್ರಾಕ್ಟರ್ ಸುಟ್ಟಿದ್ದಾರೆ. ಇನ್ನೂ ಗಲಾಟೆ ನಡೆಯುತ್ತಿದೆ. ಸರ್ಕಾರ ಈ ಬಗ್ಗೆ ಹತೋಟಿಗೆ ತರುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಇವತ್ತು ಎಲ್ಲಾ ಹಂತದಲ್ಲೂ ಸರ್ಕಾರ ವಿಫಲವಾಗಿದೆ. ಇವತ್ತು ಪೋಲೀಸ್ ಇಲಾಖೆ ಏನು ಮಾಡುತ್ತಿದೆ ಎಂದು ಗೊತ್ತಾಗುವುದಿಲ್ಲ. ನನಗೆ ಯಾರೋ ಹೇಳಿದರು. ಡಿಐಜಿ ಅವರು ಅಲ್ಲೇ ಇದ್ದರೂ ಸಹ ಸರ್ಕಾರದ ಹಸ್ತಕ್ಷೇಪ ಇಲ್ಲಿ ಇದೆ ಎಂದು ಸಂಶಯ ಬರುತ್ತದೆ. ಇಲ್ಲಿಯವರೆಗೆ ನಾರ್ಮಲ್ಸಿ ಬರಬೇಕಾಗಿತ್ತು. ಅಯೋಧ್ಯಾ ಘಟನೆ ಆದಾಗ ಇಡೀ ರಾಜ್ಯದಲ್ಲಿ ಗಲಾಟೆ ಇದ್ದು ನಮ್ಮ ಈ ಜಿಲ್ಲೆಯಲ್ಲಿ ಕೋಮು ಗಲಭೆ ಆಗಿಲ್ಲ. ಆದರೆ ಇವತ್ತು ಪುನಃ ಭಟ್ಕಳದಲ್ಲಿ ಕೋಮು ಗಲಭೆ ಆಗಿದೆ. ಸರ್ಕಾರದಿಂದ ಹತೋಟಿ ಮಾಡುವುದಕ್ಕೆ ಆಗುತ್ತಿಲ್ಲ. ಸರ್ಕಾರ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇದು 1.4.93ರಲ್ಲಿ ಶುರು ಆಯಿತು. ರಾಮನವಮಿ ಪ್ರೊಸೆಷನ್ ಮೇಲೆ ಕಲ್ಲು ಬಿತ್ತು. ಅಲ್ಲಿಂದ ಎರಡೂ ಕಡೆ ಜನರಿಗೆ ಇಂಜ್ಯುರೀಸ್ ಆಗಿದೆ, ಲೂಟಿ ಆಗಿದೆ. ಸಿಂಡಿಕೇಟ್ ಬ್ಯಾಂಕ್ ಬ್ರಾಂಚ್ ಮೇಲೆ ಬಾಂಬ್ ಹಾಕಿದ್ದಾರೆ. ಅದು ಕಂಟ್ರೀ ಬಾಂಬ್ ಎಂದರೂ ಸಹ ಅದೂ ಎಕ್ಸ್‌ಪ್ಲೋಸಿವ್ ಅಲ್ಲವೇ? ಇವತ್ತು ಅಲ್ಲಿ ಆಸ್ತಿಪಾಸ್ತಿ ನಷ್ಟ ಆಗಿದೆ. ಇವತ್ತು ಅಲ್ಲಿ ಇಂಜ್ಯುರೀಸ್ ಆಗಿರುವವರಿಗೆ ಕೇವಲ ಒಂದೂವರೆ ಸಾವಿರ ಪರಿಹಾರ ಕೊಟ್ಟಿದ್ದಾರೆ. ಸರ್ಕಾರಕ್ಕೆ ನಾಚಿಕೆ ಬರಬೇಕು. ಇವತ್ತು ಮಣಿಪಾಲ್ ಆಸ್ಪತ್ರೆಯಲ್ಲಿ ಗಾಯಗೊಂಡ ಜನರು ಇದ್ದಾರೆ. 3ನೇ ತಾರೀಖು ಈ ವಿಚಾರ ಪ್ರಸ್ತಾಪ ಮಾಡಿದಾಗ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಇವತ್ತಿನವರೆಗೂ ಕಾಂಪನ್‌ಸೇಷನ್ ಸಿಕ್ಕಿಲ್ಲ. ಸೌಹಾರ್ದ ವಾತಾವರಣ ತರುವುದಕ್ಕೆ ಯಾವ ಪ್ರಯತ್ನವನ್ನೂ ಮಾಡಿಲ್ಲ. ಇವತ್ತು ಪೋಲೀಸರು ನಿಷ್ಕ್ರೀಯರಾಗಿದ್ದಾರೆ. ಪೋಲೀಸರು ಕ್ರಮ ತೆಗೆದುಕೊಳ್ಳುವುದಕ್ಕೆ ಇಚ್ಛೆ ಇದ್ದರೂ ಸಹ ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲ. ಆ ಪರಿಸ್ಥಿತಿ ಭಟ್ಕಳದಲ್ಲಿ ನಿರ್ಮಾಣವಾಗಿದೆ. ನಿಮಗೆ ಏನಾದರೂ ಕಾನೂನು ಸುವ್ಯವಸ್ಥೆ ಇರಬೇಕೆಂಬ ಇಚ್ಛೆ ಇದ್ದರೆ ಬೇಗನೆ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಪೋಲೀಸರಿಗೆ ಫುಲ್ ಫ್ರೀಡಮ್ ಕೊಡಿ. ಇವತ್ತು ಇಲ್ಲಿ ಬಿಗಿ ಕ್ರಮ ತೆಗೆದುಕೊಳ್ಳದಿದ್ದರೆ ಅನಾಹುತ ಇನ್ನೂ ಹೆಚ್ಚು ಆಗಬಹುದು. ಇವತ್ತು ಎರಡೂ ಕಡೆಯವರಿಗೆ ಅನ್ಯಾಯವಾಗಿದೆ. ಒಂದು ಕಡೆ ಮಾತ್ರ ಆಗಿದೆ ಎಂದು ಹೇಳುವುದಿಲ್ಲ.